'ಇವರಲ್ಲಿ ನಿನಗೆ ಹಿಡಿಸಿದವರು ಯಾರು!'

'ಇವರಲ್ಲಿ ಯಾರೂ ನನಗೆ ಹಿಡಿಸಿಲ್ಲ.'

ಜಗದೀಶ ಕಿಟಿಕಿಯ ಮೂಲಕ ಆಕಾಶದೆಡೆಗೆ ನೋಡಿದ. ಆ ತಾಯಿ ಕೇಳಿದರು:

'ಮತ್ತೆ?'

'ಜಗತ್ತಿನ ಹೆಣ್ಣುಗಳೆಲ್ಲ ಮುಗಿದು ಹೋದರೋ!'

'ನನಗೆ ಗೊತ್ತಿರುವವರನ್ನೆಲ್ಲ ನಾನು ಹೇಳಿದ್ದಾಯ್ತು. ಅದ್ಯಾವುದೂ ನಿನಗೆ ಹಿಡಿಸಲಿಲ್ಲ!' ಸ್ವಲ್ಪ ಸೋತ ಭಾವದಲ್ಲಿ ಒಮ್ಮೆ ಗೊತ್ತಿಲ್ಲದವರಂತೆ ಆ ತಾಯಿ ಮತ್ತೆ ಕೇಳಿದರು:

'ಮತ್ತೆ ನಿನಗೆ ಹಿಡಿಸಿದ ಹುಡುಗಿ ಯಾವುದು!'

'ಭಾರ್ಗವಿ' ಮಂದಹಾಸದೊಡನೆ ಜಗದೀಶ ಮಧುರವಾಗಿ ನಿಟ್ಟುಸಿರಿಟ್ಟ.

'ಪೊಲೀಸನ ಮಗಳು!'

## ವೈಕಂ ಮುಹಮ್ಮದ್ ಬಷೀರ್

ಕೇರಳದ ವೈಕಂ ಸಮೀಪದ ತಲಯೋಲಪ್ಪರಂಬಿನಲ್ಲಿ ಜನಿಸಿದ ವೈಕಂ ಮುಹಮ್ಮದ್ ಬಷೀರ್ (21.01.1908 – 05.07.1994) ವಿದ್ಯಾಭ್ಯಾಸಕ್ಕೆ ತಿಲಾಂಜಲಿಯಿತ್ತು ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸುವುದರ ಮೂಲಕ ಸ್ವಾತಂತ್ರ್ಯ ಚಳವಳಿಗೆ ಧುಮುಕಿದರು. ಭಾರತದ ಉದ್ದಗಲಕ್ಕೂ ಸಂಚರಿಸಿ ಎಲ್ಲಾ ಜಾತಿ ವರ್ಗಗಳ ಜನರೊಡನೆ ಬೆರೆತು ಅಗಾಧ ಅನುಭವಗಳನ್ನು ಪಡೆದರು. ಈ ಅನುಭವಗಳನ್ನು ಅಕ್ಷರ ರೂಪಕ್ಕಿಳಿಸಿದ ಬಷೀರ್ ಮಲಯಾಳಂನಲ್ಲಿ ವಿನೂತನ ಮಾದರಿಯ ಕಥನ ಸಂಪ್ರದಾಯಕ್ಕೆ ನಾಂದಿಹಾಡಿದರು. ಸಮಾಜದ ಅನ್ಯಾಯ, ಅವ್ಯವಸ್ಥೆಗಳನ್ನು ವೈನೋದಿಕವಾಗಿ, ಹೃದಯಸ್ಪರ್ಶಿಯಾಗಿ ಮಾನವೀಯ ನೆಲೆಯಿಂದ ಮಂಡಿಸಿದ್ದಾರೆ. ವಿದೇಶಗಳ ಅನೇಕ ಭಾಷೆಗಳಿಗೆ ಬಷೀರ್ ಕೃತಿಗಳು ಅನುವಾದಗೊಂಡಿವೆ. 'ನನ್ನಜ್ಜನಿಗೊಂದಾನೆಯಿತ್ತು', 'ಪಾತುಮ್ಮನ ಆಡು', 'ಬಾಲ್ಯಕಾಲಸಖಿ' ಮೊದಲಾದ ಅನೇಕ ಕತೆ ಕಾದಂಬರಿಗಳ ಮೂಲಕ ಕನ್ನಡದಲ್ಲಿಯೂ ಪರಿಚಿತರಾಗಿರುವ ಬಷೀರ್ ನೋವಿನಲ್ಲೂ ನಗೆಯ ಉಕ್ಕಿಸಬಲ್ಲ ಕತೆಗಾರ.

## ಮೋಹನ ಕುಂಟಾರ್

ಕೇರಳದ ಕಾಸರಗೋಡಿನ ಕುಂಟಾರಿನವರಾದ ಮೋಹನ ಕುಂಟಾರ್ ಕ್ಯಾಲಿಕಟ್ ವಿಶ್ವವಿದ್ಯಾಲಯ, ಮದುರೈ ಕಾಮರಾಜ ವಿಶ್ವವಿದ್ಯಾಲಯಗಳಲ್ಲಿ ಉನ್ನತ ಶಿಕ್ಷಣ ಪಡೆದು ಪ್ರಸ್ತುತ ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ಸಂಶೋಧನೆ, ಅನುವಾದ ಕ್ಷೇತ್ರಗಳಲ್ಲಿ ಗಮನಾರ್ಹ ಕೆಲಸ ಮಾಡಿರುವ ಇವರ 40ಕ್ಕೂ ಹೆಚ್ಚು ಕೃತಿಗಳು ಪ್ರಕಟವಾಗಿವೆ. ಇಂಗ್ಲಿಷಿನಿಂದ 'ವಿಯೆಟ್ನಾಮ್ ಆನೆಯನ್ನು ಮಣಿಸಿದ ಮಿಡತೆಗಳು', ಮಲಯಾಳಂನಿಂದ ವೈಕಂ ಮುಹಮ್ಮದರ 'ಬಷೀರ್ ಕಥೆಗಳು', 'ವಾಸುದೇವನ್ ನಾಯರ್ ಕತೆಗಳು', ತಗಳಿ ಶಿವಶಂಕರ ಪಿಳ್ಳೆಯವರ 'ತೋಟಿಯ ಮಗ', ಉರುಬ್ ಅವರ 'ಸುಂದರಿಯರು ಸುಂದರರು', ಪಿ. ವತ್ಸಲಾ ಅವರ 'ಆಗ್ನೇಯ', ಒ. ಚಂದುಮೆನೋನ್ ಅವರ 'ಶಾರದ' ಕಾದಂಬರಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ.